ಕರ್ನಾಟಕ ವಿಧಾನ ಸಭೆ

ಶನಿವಾರ 31ನೇ ಮಾರ್ಚ್ 2001ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು

ಪೀಠದಲ್ಲಿ ಉಪಸ್ಥಿತರಿದ್ದರು

ಶ್ರೀ ಬಿ.ಆರ್. ನೀಲಕಂಠಪ್ಪ: ಸನ್ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು: ತಮ್ಮ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ. ಈಗ ಬೇಡ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಆರ್. ನೀಲಕಂಠಪ್ಪ: ನಾನು ಕಳೆದ 10 ದಿನಗಳಿಂದ ಕೇಳುತ್ತಿದ್ದೇನೆ, ಇದು ಕೊನೆಯ ದಿವಸ. ಸದನಕ್ಕೆ ಗೌರವ ತರುತ್ತಿದ್ದಾರೆ. ಸದಸ್ಯರ, ಸಭಾಧ್ಯಕ್ಷರ ಮೇಲೆ ಅಗೌರವವಾಗುವ ಹಾಗೆ ಮಾತನಾಡಿದ್ದಾರೆ.

ಅಧ್ಯಕ್ಷರು: ನನ್ನ ಹತ್ತಿರ ಪೆಂಡಿಂಗ್ ಇದೆ, I will solve the problem. Leave it to me. This is not zero hour. ಈಗ ಬೇಡ.

ಶ್ರೀ ಬಿ.ಆರ್. ನೀಲಕಂಠಪ್ಪ: ನಮ್ಮ ನಿಮ್ಮ ಮೇಲೆ ಆಪಾದನೆ ಮಾಡಿದ್ದಾರೆ. ತಾವು ಅವಕಾಶ ಕೊಡುವುದಾದರೆ, ಹಕ್ಕುಚ್ಯುತಿ ನಿರ್ಣಯವನ್ನು ತರುತ್ತೇವೆ.

MR. SPEAKER: Can you not wait for another fortyfive minutes?

1. ಪ್ರಶ್ನೋತ್ತರಗಳು

ತದ ಹಿಂದಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕುಂದಾಪುರ ತಾಲ್ಲೂಕಿನಲ್ಲಿ ಘಾಪಾ ಹಾಗದ ಕೊರತೆ

54 (337) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕಳೆದ 6 ತಿಂಗಳುಗಳಿಂದ ರೂ. 5 10, 50 ಮುಖ ಬೆಲೆಯ ಸ್ಟಾಂಪ್ ಪೇಪರ್ ದೊರೆಯುತ್ತಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಸ್ಟಾಂಪ್ ಪೇಪರುಗಳನ್ನು ವಿತರಿಸುವರೆ?:

ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಸಾಕಷ್ಟು ಮುದ್ರಾಂಕಗಳು ದಾಸ್ತಾನಿದ್ದು ಮುದ್ರಾಂಕ ಮಾರಾಟಗಾರರಿಗೆ ಅವರ ಬೇಡಿಕೆಗನುಗುಣವಾಗಿ ಮುದ್ರಾಂಕಗಳನ್ನು ವಿತರಿಸಲಾಗುತ್ತಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ (ಶ್ರೀ ಕೆ. ಗೋಪಾಲ ಪೂಜಾರಿ, ಬೈಂದೂರು ಅವರ ಪರವಾಗಿ): 5-10 ರೂಪಾಯಿಗಳ ಸ್ಟಾಂಪ್ ಪೇಪರ್ ಕೇಳಿದರೆ ಇರುವುದಿಲ್ಲ. 200-300 ರೂಪಾಯಿಗಳ ಸ್ಟಾಂಪ್ ಪೇಪರ್ ಮಾರುವ ವ್ಯವಸ್ಥೆ ಇದ್ದು, ಇದರಿಂದ ಸಾಮಾನ್ಯ ಜನರಿಗೆ ಸಮಸ್ಯೆಯಾಗುತ್ತಿದ್ದು, ಇನ್ನು ಮುಂದೆ ಈ ರೀತಿಯಾಗದ ಹಾಗೆ ವ್ಯವಸ್ಥೆ ಮಾಡಬೇಕೆಂದು ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ಶಿವಣ್ಣ (ಮುಖ್ಯಮಂತ್ರಿಗಳ ಪರವಾಗಿ): ಕುಂದಾಪುರದಲ್ಲಿ ಸ್ಟಾಂಪ್ ವೆಂಡರ್ಸ್ ಎಂದು ಸುಮಾರು 22 ಜನರು ನೋಂದಾವಣೆ ಮಾಡಿಕೊಂಡಿದ್ದು, ಅವರಲ್ಲಿ ಸ್ಟಾಂಪ್ ಪೇಪರ್ ಬೇಕಾಗಿದೆ ಎಂದು ಕೇವಲ 6 ಜನರು ಕೇಳಿದ್ದಾರೆ. ಈ ತಿಂಗಳಲ್ಲಿ ಸ್ಟಾಂಪ್ ಪೇಪರ್‌ನ ಸ್ಟಾಕ್ ಸಾಕಷ್ಟಿದೆ. ಏನಾದರೂ ತೊಂದರೆ ಇದೆ ಎಂದು ಹೇಳಿದರೆ, ಸಪ್ಲೈ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಹಾಗಾದರೆ, ಉಳಿದವರು ವ್ಯಾಪಾರವನ್ನು ನಿಲ್ಲಿಸಿದ್ದಾರೆಯೇ? ಅಲ್ಲಿ ಶಾರ್ಟೇಜ್ ಇದ್ದರೂ ಇರಬಹುದು. ಅದರ ಬಗ್ಗೆ ಸಚಿವರು ಪರಿಶೀಲನೆ ಮಾಡಬೇಕು.

ಶ್ರೀ ಎಂ. ಶಿವಣ್ಣ: ನಮಗಿರುವ ಮಾಹಿತಿಯ ಪ್ರಕಾರ, 5 ರೂಪಾಯಿಯ ಸ್ಟಾಂಪ್ ಪೇಪರ್ 1,150,10 ರೂಪಾಯಿ 1,577 ಸ್ಟಾಂಪ್ ಪೇಪರ್ 20 ರೂಪಾಯಿ ಸ್ಟಾಂಪ್ ಪೇಪರ್ 2,729 ಸ್ಟಾಂಪ್‌ಪೇಪರ್50 ರೂಪಾಯಿ 2,340 ಸ್ಟಾಂಪ್ ಪೇಪರ್ ಸ್ಟಾಕ್ ಇದೆ. ಅವರು ಬೇಕೆಂದೇ ಕೃತಕ ಅಭಾವ ಉಂಟು ಮಾಡುತ್ತಿದ್ದಾರೆ. ಶಾರ್ಟೇಜ್ ಇದ್ದರೆ, ಎಷ್ಟು ಬೇಕಾದರೂ ಸಪ್ಲೈ ಮಾಡುತ್ತೇವೆ.

ಬೆಂಗಳೂರಿನ ಮಾಗಡಿ ರಸ್ತೆ ಪೊಲೀಸ್ ವಸತಿ ಸಮುಚ್ಛಯದ ದುರಸ್ತಿ

55 (341) **ಶ್ರೀ ಸುರೇಶ್ ಕುಮಾರ್ ಎಸ್.** (ರಾಜಾಜಿನಗರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಪೊಲೀಸ್ ವಸತಿ ಸಮುಚ್ಚಯ ನಿರ್ಮಾಣವಾದದ್ದು ಯಾವಾಗ; ಇಲ್ಲಿರುವ ವಸತಿಗಳೆಷ್ಟು;